ಎರಡನ್ನೂ ಪರೀಕ್ಷೆ ಮಾಡಿದ್ದೇವೆ. ಇದೋ ಇಲ್ಲಿದೆ ರಿಪೋರ್ಟು ಎಂದ ಬೋಳುತಲೆಯವ.

"ಇದು ಸತ್ಯವೋ?"

"ಹೌದು ಮಹಾಸ್ವಾಮಿ. ಇದು ಸತ್ಯ. ಇದರಲ್ಲಿರುವ ಸಂಗತಿಗಳು ವಿಶ್ವಾಸಾರ್ಹ. ಎರಡೆರಡು ಸಾರಿ ಪರೀಕ್ಷಿಸಿ ಖಾತ್ರಿ ಪಡಿಸಿಕೊಂಡಿದ್ದೇವೆ ಸ್ವಾಮಿ."

"ಸರಿ ಹಾಗಿದ್ದರೆ ವಿವರ ಹೇಳಿ."

"ಮಹಾಸ್ವಾಮಿ. ನಮ್ಮ ಪರೀಕ್ಷೆಯ ಪ್ರಕಾರ ವಾದಿಯ ಇತರೆ ಡಿಎನ್‌ಎ ಪ್ರತಿವಾದಿಗಳಿಬ್ಬರ ಡಿಎನ್‌ಎಗಳಿಂದ ಬಹಳ ಭಿನ್ನವಾಗಿದೆ. ಅಂದರೆ ಇವರು ಒಂದೇ ತಾಯಿಯ ಮಕ್ಕಳಲ್ಲ. ಹಾಗೆಯೇ ಮಹಾಸ್ವಾಮಿ, ವಾದಿಯ ವೈ ಡಿಎನ್‌ಎಗೂ, ಮೊದಲನೆ ಪ್ರತಿವಾದಿಯ ವೈ ಡಿಎನ್‌ಎಗೂ ಬಹಳಷ್ಟು ಹೋಲಿಕೆ ಇದೆ."

"ಮತ್ತೆ ಎರಡನೆಯ ಪ್ರತಿವಾದಿಯದ್ದು?"

"ಮಹಾಸ್ವಾಮಿ. ಅವರ ವೈ ಡಿಎನ್‌ಎ ವಾದಿಯದ್ದರ ಜೊತೆಗಾಗಲಿ, ಮೊದಲ ಪ್ರತಿವಾದಿಯದ್ದರ ಜೊತೆಗಾಗಲಿ ಹೋಲುತ್ತಿಲ್ಲ."

"ಹಾಗಂದರೆ?"

"ಈ ಪರೀಕ್ಷೆಯ ಪ್ರಕಾರ ವಾದಿ ಹಾಗೂ ಮೊದಲ ಪ್ರತಿವಾದಿಗಳಲ್ಲಿರುವ ವೈ ಡಿಎನ್‌ಎ ಒಂದೇ ಮೂಲದ್ದು. ಎರಡನೆಯ ಪ್ರತಿವಾದಿಯ ವೈ ಡಿಎನ್‌ಎಯ ಮೂಲ ಅದಲ್ಲ."

"ಸರಿಯಾಗಿ ಬಿಡಿಸಿ ಹೇಳಿ. ಇವರೆಲ್ಲರ ಸಂಬಂಧ ಹೇಗೆ ಅಂತ ನಿಮ್ಮ ಪರೀಕ್ಷೆ ಹೇಳುತ್ತದೆ?"

"ಮಹಾಸ್ವಾಮಿ. ನಮ್ಮ ಪರೀಕ್ಷೆ ವಾದಿ ಹಾಗೂ ಮೊದಲ ಪ್ರತಿವಾದಿಯ ತಂದೆ ಒಬ್ಬನೇ ವ್ಯಕ್ತಿ. ಆದರೆ ಅದೇ ವ್ಯಕ್ತಿ ಎರಡನೆಯ ಪ್ರತಿವಾದಿಯ ತಂದೆ ಅಲ್ಲ ಅಂತ ಹೇಳುತ್ತೆ ಸ್ವಾಮಿ."

"ಆದರೆ ಪ್ರತಿವಾದಿಗಳಿಬ್ಬರ ತಾಯಿಯೂ ಒಬ್ಬರೇ ಅಲ್ಲವೇನ್ರಿ?"

"ಇರಬಹುದು ಮಹಾಸ್ವಾಮಿ. ಆದರೆ ವೈ ಡಿಎನ್‌ಎ ತಂದೆಯಿಂದ ಮಾತ್ರ ಬರುವಂಥದ್ದು. ಹೀಗಾಗಿ ಅವರಿಬ್ಬರ ತಂದೆಯೂ ಬೇರೆ, ಬೇರೆ."

ಉಳಿದ ಯಾವ ಮಾತೂ ಸತೀಶ, ಅನೀಶರ ಕಿವಿಗೆ ಬೀಳಲಿಲ್ಲ.

ಸತೀಶನ ಕಣ್ಣಿಗೆ ದೂರದಲ್ಲಿದ್ದ ಆಲದಮರವೇ ಕಾಣುತ್ತಿತ್ತು. ಅದು ಬೆಳೆದು ಮಹಾವೃಕ್ಷವಾಗಿದೆ ನಿಜ. ಜೀವಿಗಳ ಆಸರೆಯ ಮರವಾಗಿದೆ. ಆದರೆ ಅದರ ಮೂಲ ಕಾಂಡ ಯಾವುದು, ಬಿಳಲು ಯಾವುದು ತಿಳಿಯದಂತಾಗಿತ್ತು. ಅನೀಶನಿಗೋ 'ಹಾದರಕ್ಕೆ ಹುಟ್ಟಿದವ' ಎನ್ನುವ ಮಾತು ಕಿವಿಗೆ ಅಪ್ಪಳಿಸುತ್ತಿತ್ತು.

**ರೇವತಿ**

ಕಥೆಗಾರರು ವೃತ್ತಿಯಿಂದ ವಿಜ್ಞಾನಿಗಳು. ಹವ್ಯಾಸದಲ್ಲಿ ವಿಜ್ಞಾನ ಸಂವಹನಕಾರರು. ಕಳೆದ ಮೂವತ್ತು ವರ್ಷಗಳಿಂದ ವಿಜ್ಞಾನ ಲೇಖನಗಳನ್ನು ಬರೆದು ಜನಪ್ರಿಯತೆ ಪಡೆದಿರುವ ಇವರು ವಿಜ್ಞಾನವನ್ನು ಆಧರಿಸಿದ ಹಲವು ಕತೆಗಳನ್ನೂ ಬರೆದಿದ್ದಾರೆ.